



ಮತ್ತೆ ನೆಲವನೂ ಕಾಣಿಸಿದರು!'

ಉರುಟಿ ಬಿದ್ದಿದೆ ಕೊಳಲು ಮೈ ತುಂಬ ಬಿರುಕು
ಏಳು ತೂತಲು ಗೆದ್ದಲು ಮೂಡಿದೆ ಹುತ್ತ
ಮನೆ ಮುಂದೆ ಮುರಿಟಿರುವ ತುಳಸಿಯೆಲೆ
ಕೂಗಿ ಸಾರುತಲಿಗೆ ಕೇರಿಗೇ ಕೇಳುವಂತೆ
'ಹೊತ್ತು ಹೋಗಿದೆ ಕಂದ
ಹೊತ್ತು ಹೋದೆ'
ಮಾರ್ದನಿಸುತಲಿದೆ ಎದೆಯ ಕಗ್ಗವಿಯಲ್ಲಿ
ತಾಯಿ ಮೆಟ್ಟಿ ಕುಣಿವ ಕಾಲಂದುಗೆಯ ಸದ್ದು

ಕೆಂಡದ ಗಿರಿಯ ಮೇಲೆ ಉರಿದ ಕೆಂಡವನೆ ಇಟ್ಟು
ಆರಗಿನಾರತಿ ಎತ್ತಿ ಹಾಕಿದರೋ ಎದೆಯ ಮೇಲೆ
ಕುಣಿದಳಿದ ಕೆಂಡದ ಮೇಲೆ ಉರಿವ ಕೆಂಡದ ಲೀಲೆ
ಮಂದಹಾಸ ಮೀಮಾಂಸೆ
ಸದ್ದು
ಹಾಡುತ್ತಲಿದೆ ಮಿತ್ರವೃಂದ
ಮೊಳಗಿ ಮಾರ್ದನಿಸುತಲಿದೆ ಸುತ್ತೆಲ್ಲ ಸೊಲ್ಲು–

ಜ್ಯೋತಿ ಬೆಳಗುತಿದೆ ಪರಂಜ್ಯೋತಿ ಬೆಳಗುತಿದೆ।
ಮಾತು ಮನಂಗಳಿಂದತ್ತತ್ತ ಮೀರಿದ॥
ಸಾತಿಶಯದ ನಿರುಪಾಧಿಕ ನಿರ್ಮಲ।
ಜ್ಯೋತಿ ಬೆಳಗುತಿದೆ॥